


ಮತ್ತು ಅರಳಿಕಟ್ಟೆಯನ್ನು ಹುಡುಕುತ್ತಾ, ಅವರಿವರನ್ನು ಕೇಳುತ್ತಾ ಬರುತ್ತಿರುವಾಗ, ಆ ಗೂಳಿಗಳು ನುಗ್ಗಿ ಅವನ ಕೋಪ ಏರಿಸಿದ್ದವು. ಅದೂ ಅಲ್ಲದೆ ಕೆಲವರು ಇವನಿಗೆ ಯಾವಯಾವುದೋ ಅಡ್ರೆಸ್ ಹೇಳಿ ದಾರಿತಪ್ಪಿಸಿ ಅಲೆಯುವಂತೆ ಮಾಡಿದ್ದರು. ಅವಳ ಮನೆಯನ್ನು ಹುಡುಕುತ್ತಾ ಅಲೆಯುತ್ತಿದ್ದ ರಾಜೀವನಿಗೆ ನಿಜಕ್ಕೂ ಈಕೆ ಹೊರಗೆ ಕಾಣುವಂತೆ ಮುಗ್ಧಳಾ ಅಥವಾ ಒಳಗೆ ನಮಗರಿಯದ ಮತ್ತೊಂದು ಮುಖವಿದೆಯಾ? ಎಂಬ ಸಂಶಯಗಳು ಶುರುವಾದವು. ಬೆಂಗಳೂರಿನಲ್ಲಿ ಮನೆಗೆಲಸಕ್ಕೆ ಬರುವವರು ಎಲ್ಲಿಂದ ಬರುತ್ತಾರೆ, ಕೆಲಸದ ನಂತರ ಎಲ್ಲಿಗೆ ಹೋಗುತ್ತಾರೆ? ಅವರ ಹಿನ್ನೆಲೆ ಏನು ಎಂಬುದನ್ನು ಯಾರು ನೋಡುತ್ತಾರೆ? ಇತ್ತೀಚೆಗೆ ಬೆಂಗಳೂರಿನಲ್ಲಿ ಒಳ್ಳೆಯ ಮನೆಗೆಲಸದವರು ಸಿಗುವುದು ಕಷ್ಟ. ಸಿಕ್ಕರೂ ಕೈಬಾಯಿ ಶುದ್ಧವಾಗಿರುವವರು ಸಿಗುವುದು ಇನ್ನೂ ದುರ್ಲಭ. ಈ ಮಧ್ಯೆ ಅವರು ಇಂತಹ ಕೆಲಸಗಳಲ್ಲಿ ಭಾಗವಹಿಸುತ್ತಾರೆಂದು ನಮಗೇನು ಕನಸು ಬೀಳಬೇಕಾ? ಎಂದು ರಾಜೀವನ ಒಂದು ಮನಸ್ಸು ಹೇಳಿದರೆ, ಮತ್ತೊಂದು ಮನಸ್ಸು 'ಛೇ ಅವಳ ಮಾತು, ನಡೆ-ನುಡಿ, ಕಣ್ಣುಗಳಲ್ಲಿನ ಆ ಪ್ರೀತಿ, ಭಾವನೆಗಳನ್ನು ಕಂಡರೆ, ಈಕೆ ಆ ರೀತಿಯ ಹೆಂಗಸೆಂದು ತೋರುವುದಿಲ್ಲ' ಎಂದು ಹೇಳುತ್ತಿತ್ತು. ಹಾಗೇ ಅನಿಸಿದ ಬೆನ್ನಲ್ಲೇ 'ಈಗಿನ ಕಾಲದಲ್ಲಿ ಯಾರನ್ನೂ ಮುಖನೋಡಿ ಸುಮ್ಮನೆ ನಂಬಲಾಗುವುದಿಲ್ಲ. ಇವಳ ನಡೆನುಡಿ, ವೇಷಭೂಷಣಗಳನ್ನು ನೋಡಿದರೆ ಈಕೆ